**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.640/2016**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ರಾಜಪ್ಪ ತಂದೆ ಸಾಬಣ್ಣ ರಾಕನೋರ
ವಃ 32 ವರ್ಷ, ಉಃ ಒಕ್ಕಲುತನ

2. ಸಾಬಣ್ಣ ತಂದೆ ಬಸಪ್ಪ ರಾಕನೋರ
ವಃ 61 ವರ್ಷ, ಉಃ ಕೂಲಿ ಕೆಲಸ

3. ಬಸವರಾಜ ತಂದೆ ಸಾಬಣ್ಣ ರಾಕನೋರ
ವಃ 20 ವರ್ಷ, ಉಃ ಕುರಿ ಕಾಯುವುದು

4. ಮಲ್ಲಮ್ಮ ಗಂಡ ಸಾಬಣ್ಣ ರಾಕನೋರ
ವಃ 45 ವರ್ಷ, ಉಃ ಕೂಲಿ ಕೆಲಸ

5. ಗುಂಡಮ್ಮ ತಂದೆ ಬಸಪ್ಪ ರಾಕನೋರ
ವಃ 65ವರ್ಷ, ಉಃ ಕೂಲಿ ಕೆಲಸ
ಎಲ್ಲರೂ ಸಾಃ ತೆಲ್ಲೂರ, ತಾಃ ಸೇಡಂ **(Abated)**

----

**ದೋಷಾರೋಪಣೆ**

ನಾನು **ಶ್ರೀ ಬಾಲು,** ಬಿ.ಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 09-03-2016 ರಂದು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ತೆಲ್ಲೂರ ಗ್ರಾಮದ ಪಿರ್ಯಾದಿಯ ಮನೆಯ ಮುಂದೆ ಚಾಸಾ.1,4,6 ಮತ್ತು 7 ನೇದ್ದವರು ಮನೆಯಲ್ಲಿದ್ದಾಗ ಆರೋಪಿ 1 ರಿಂದ 5ನೇದ್ದವರು ಕೂಡಿಕೊಂಡು ಬಂದು ಫಿರ್ಯಾದಿಯ ಮನೆಯ ಮುಂದೆ ನಿಂತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ಚಾಸಾ.1 ನೆದ್ದವರು ಮನೆಯಿಂದ ಹೊರಗಡೆ ಬಂದು ಆಪಾದಿತರಿಗೆ ಯಾಕೆ ಈ ತರಹ ಬೈಯುತ್ತಿದ್ದಿರಿ ಅಂತ ಕೇಳಿದ್ದಕ್ಕೆ ಆರೋಪಿ.2 ರವರು ಪಿರ್ಯಾದಿಗೆ ಮತ್ತೆ ಅವಾಚ್ಯ ಶಬ್ದಗಳಿಂದಬೈದು ಜಗಳ ತೆಗೆದು ಬಡಿಗೆಯಿಂದ ಹೊಡೆದ್ದು, ಸಾರ್ವಜನಿಕ ಶಾಂತಿ ಭಂಗ ಉಂಟುಮಾಡಿರುತ್ತಾರೆ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 143, 147,148 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆರೋಪಿ .3 ನೇದ್ದವನು ಪಿರ್ಯಾದಿಗೆ ಕೈಯಿಂದ ಹೊಡೆದದ್ದು ಮತ್ತು ಚಾಸಾ.7ನೇದ್ದವನಿಗೆ ಜಗಳಕ್ಕೆ ಬಿದ್ದು ಕೈಯಿಂದ ಹೊಡೆದದ್ದು , ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 323ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆರೋಪಿ.2 ನೇದ್ದವನು ಪಿರ್ಯದಿಾಗೆ ಬಡಿಗೆಯನ್ನು ತೆಗೆದುಕೊಂಡು ಪಿರ್ಯಾದಿಯ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದು, ಆರೋಪಿ.1 ನೇದ್ದವನು ಪಿರ್ಯಾದಿಗೆ ಕಲ್ಲಿನಿಂದ ಬೆನ್ನಿಗೆ ಹೊಡೆದು ಗುಪ್ತಗಾಯಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 324 ಸಹವಾಚಕ ಕಲಂ 149ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು ಆರೋಪಿ.1 ನೇದ್ದವನು ಚಾಸಾ.4 ನೇದ್ದವರ ತಲೆಯ ಮೇಲಿನ ಕೂದಲು ಮತ್ತು ಕೈಗಳನ್ನು ಹಿಡಿದು ಎಳೆದಾಡಿ ಅವಳ ಮಾನಕ್ಕೆ ಕುಂದು ಬರುವ ನಿಟ್ಟಿನಲ್ಲಿ ನಡೆದುಕೊಂಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 354 ಸಹವಾಚಕ ಕಲಂ 149ರ ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಐದನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆರೋಪಿತರೆಲ್ಲರೂ ಸೇರಿ ಪಿರ್ಯಾದಿಯ ಮನೆಯ ಮುಂದೆ ನಿಂತು ಬೊಸಡಿ ಮಕ್ಕಳೇ ರಂಡಿ ಮಕ್ಕಳೇ ಅಂತಾ ಹಾಗೂ ಆರೋಪಿ.2 ನೇದ್ದವನು ಪಿರ್ಯಾದಿಗೆ ಏ ಎಲ್ಯಾ ಬೊಸಡಿ ಮಗನೇ ನನಗೆ ಎದುರು ಮಾತಾಡುತ್ತಿಯಾ ರಂಡಿ ಮಗನೇ ನಿನಗೆ ಬಹಳ ಸೊಕ್ಕು ಬಂದಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.504 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆರೋಪಿ.4, 5 ನೇದ್ದವರು ಈ ಸೂಳೆ ಮಕ್ಕಳ್ದು ಬಹಳ ಆಗ್ಯಾದ ಸುಮ್ನೇ ಬಿಡಬ್ಯಾಡರಿ ಖಲ್ಲಾಸ ಮಾಡಿರಿ ಅಂತಾ ಜೀವದ ಬೆದರಿಕೆ ಹಾಕಿದ್ದು, ಹಾಗೂ ಆರೋಪಿ.2 ನೇದ್ದವನು ಬೊಸಡಿ ಮಕ್ಕಳೇ ಇವತ್ತು ಉಳಿದುಕೊಂಡಿದ್ದಿರಿ ಒಂದಲ್ಲ ಒಂದು ದಿವಸ

ನಿಮ್ಮೆಲ್ಲರಿಗೆ ಹೊಡೆದು ಖಲ್ಲಾಸ ಮಾಡುತ್ತೇವೆ ಅಂತಾ ಜೀವದ ಬೇದರಿಕೆ ಹಾಕಿದ್ದು, ಆರೋಪಿತರಾದ ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 17-09-2025 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.640/2016</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ಧ ಃಃ-

ಆರೋಪಿ ನಂಃ 1. ರಾಜಪ್ಪ ತಂದೆ ಸಾಬಣ್ಣ ರಾಕನೋರ
ವಃ 32 ವರ್ಷ, ಉಃ ಒಕ್ಕಲುತನ
ಸಾಃ ಸಾಃ ತೆಲ್ಕೂರ, ತಾಃ ಸೇಡಂ ಹಾಗೂ ಇತರರು .

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-2

ಆ-3

ಆ-4

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 17-09-2025 ಪ್ರ.ದ.ನ್ಯಾ.ದಂ. ಸೇಡಂ.